International Journal of Kannada Research
www.kannadajournal.com

**ISSN: 2454–5813**
IJKR 2017; 3(4): 03-07
© 2017 IJKR
www.kannadajournal.com
Received: 02-08-2017
Accepted: 03-09-2017

**ರೇವತಿ ಸಿ.ಎಂ**
ಉಪನ್ಯಾಸಕಿ, ಕನ್ನಡ ವಿಭಾಗ,
ಕಾವೇರಿ ಕಾಲೇಜು, ವಿರಾಜಪೇಟೆ,
ಸಂಶೋಧನಾ ವಿದ್ಯಾರ್ಥಿನಿ,
ಜಾನಪದ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

**Correspondence**
**ರೇವತಿ ಸಿ.ಎಂ**
ಉಪನ್ಯಾಸಕಿ, ಕನ್ನಡ ವಿಭಾಗ,
ಕಾವೇರಿ ಕಾಲೇಜು, ವಿರಾಜಪೇಟೆ,
ಸಂಶೋಧನಾ ವಿದ್ಯಾರ್ಥಿನಿ,
ಜಾನಪದ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಕೊಡಗಿನ ತೆರೆಕಟ್ಟುವ ಆಚರಣೆಯ ಸಾಂಸ್ಕೃತಿಕ ಸ್ವರೂಪ

**ರೇವತಿ ಸಿ.ಎಂ**

ಕೊಡಗು ಜಿಲ್ಲೆ ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಕರ್ನಾಟಕ ಸಂಸ್ಕೃತಿಗೆ ತನ್ನದೇ ಆದ ಕೊಡುಗೆ ನೀಡಿದೆ. ಭೌಗೋಳಿಕವಾಗಿ ಪುಟ್ಟದಾಗಿರುವ ಕೊಡಗು ಸಾಂಸ್ಕೃತಿಕವಾಗಿ ವಿಶಿಷ್ಟತೆಯನ್ನು ಹೊಂದಿರುವ ಜಿಲ್ಲೆ. ಇಲ್ಲಿನ ಪ್ರಮುಖ ಜನಾಂಗ ಕೊಡವರು. ಕೊಡವ ಸಂಸ್ಕೃತಿ ಆಚರಣೆಗಳ ಆಗರ. ಅದರಲ್ಲಿ ವಿಶೇಷವಾದುದು ಧಾರ್ಮಿಕ ಆರಾಧನಾ ಪ್ರಕಾರಗಳಲ್ಲಿ ಒಂದಾದ ತೆರೆಕಟ್ಟುವ ಆಚರಣೆ. ದೈವಗಳ ಹಾಗೂ ವಂಶದ ಹಿರಿಯರ ಪ್ರೀತ್ಯರ್ಥವಾಗಿ ಈ ಆಚರಣೆಯನ್ನು ನಡೆಸಲಾಗುತ್ತದೆ. ಆಯಾ ಗ್ರಾಮಗಳಲ್ಲಿ ಮತ್ತು ಕುಟುಂಬಗಳಲ್ಲಿ ನೆಲೆಸಿರುವ ಚೌಂಡಿ, ಭಗವತಿ, ಭದ್ರಕಾಳಿ, ಸಾರ್ತಾವು, ಪೊವ್ವದಿ, ಅಯ್ಯಪ್ಪ, ಕುಳಿಯ, ವಿಷ್ಣುಮೂರ್ತಿ ಮುಂತಾದ ದೈವಗಳನ್ನು ತೆರೆಕಟ್ಟುವ ಆಚರಣೆಯ ಮೂಲಕ ಆರಾಧಿಸಲಾಗುತ್ತದೆ. ವೇಷ ಹಾಗೂ ಮುಖವಾಡವನ್ನು ಧರಿಸಿ ಅಲೌಕಿಕ ದೈವಗಳನ್ನು ವ್ಯಕ್ತಿ ಮಾಧ್ಯಮದ ಮೂಲಕ ಆವಾಹಿಸಿ ಸಂತೃಪ್ತಿಪಡಿಸುವ ಪ್ರಕ್ರಿಯೆಯನ್ನು ತೆರೆಕಟ್ಟುವುದು ಎನ್ನುತ್ತಾರೆ. ಧಾರ್ಮಿಕ ಹಾಗೂ ಸಾಮಾಜಿಕ ಉದ್ದೇಶವನ್ನು ಹೊಂದಿರುವ ತೆರೆಕಟ್ಟುವ ಆಚರಣೆ ಕೊಡಗಿನ ಗ್ರಾಮ ಜೀವನದ ಅವಿಭಾಜ್ಯ ಅಂಗವಾಗಿದೆ. ತೆರೆಕಟ್ಟುವ ಆಚರಣೆಯನ್ನು ನಡೆಸುವವರು ಭೂಮಾಲಿಕರಾದ ಕೊಡವರಾದರೂ ಅದನ್ನು ಕಟ್ಟುವವರು ತಳ ಸಮುದಾಯದವರಾದ ಪಣಿಕ, ಬಣ್ಣ, ಮತ್ತು ಮಲಿಯರು. ಇವರನ್ನು ತೆರೆಕಾರ\ ತೆರೆಕಟ್ಟುವಯಿಂಗ(ತೆರೆಕಟ್ಟುವವರು) ಎನ್ನುತ್ತಾರೆ.

ಸಾಮಾಜಿಕ ವ್ಯವಸ್ಥೆಯಾಗಿ ವಿಕಾಸ ಹೊಂದಿರುವ ತೆರೆಕಟ್ಟುವ ಆಚರಣೆಯಲ್ಲಿ ಸಾಮಾಜಿಕತೆ, ಧಾರ್ಮಿಕತೆ, ಸಾಂಸ್ಕೃತಿಕತೆ, ಮನೋವೈಜ್ಞಾನಿಕತೆಯ ಮುಖಗಳು ಆಚರಣೆಯ ಸಂದರ್ಭದಲ್ಲಿ ಸಂಕೀರ್ಣವಾಗಿ ಅಭಿವ್ಯಕ್ತಗೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ತೆರೆಕಟ್ಟುವ ಆಚರಣೆಯನ್ನು ಅದರ ಸಾಂಸ್ಕೃತಿಕ ಸಂದರ್ಭದಿಂದ ಪ್ರತ್ಯೇಕಿಸಿ ನೋಡಲಾಗುವುದಿಲ್ಲ. ಸಾಂಸ್ಕೃತಿಕವಾಗಿರುವ ಆಚರಣೆಯ ಎಲ್ಲಾ ವಿವರಗಳನ್ನು ಪ್ರಸ್ತಾವಿಸಿ ತೆರೆಕಟ್ಟುವ ಆಚರಣೆಯ ಸ್ವರೂಪವನ್ನು ಇಲ್ಲಿ ನಿರೂಪಿಸಲಾಗಿದೆ.

ತೆರೆಕಟ್ಟುವ ಆಚರಣೆಯ ಸಾಂಸ್ಕೃತಿಕ ಸ್ವರೂಪ ಹಾಗು ವಿಧಿವಿಧಾನಗಳನ್ನು ಹೀಗೆ ನಿರೂಪಿಸಬಹುದು.

1. ಪೂರ್ವಭಾವಿ ಹಂತ:– ಈ ಹಂತದಲ್ಲಿ ನಮ್ಮೆ ಕುರಿಪೊ(ಹಬ್ಬದ ದಿನ ನಿಗದಿಗೊಳಿಸುವುದು), ಕೊಲೆ ಕೆತ್ತುವೊ(ಗೊನೆ ಕಡಿಯುವುದು). ಭಂಡಾರ ಉಳ್‌ಪೊ(ಭಂಡಾರ ಇಳಿಸುವುದು) ವಿಧಿಗಳು ನಡೆಯುತ್ತವೆ.
2. ತೆರೆಕಾರರು ನಿರ್ವಹಿಸಬೇಕಾದ ಕೆಲಸಗಳು:– ಚಂಡೆ ಅಥವಾ ಮದ್ದಳೆಯನ್ನು ಬಾರಿಸುತ್ತಾ ತೆರೆಪಾಟ್(ತೆರೆಹಾಡು) ಹಾಡುವುದು, ಎಣ್ಣೆ ವೀಳ್ಯ ಸ್ವೀಕರಿಸುವುದು, ಸ್ನಾನ ಮಾಡಿ ಮಡಿಯುಟ್ಟು ಬಣ್ಣಗಾರಿಕೆಗೆ ಸಿದ್ಧವಾಗುವುದು, ಅಲಂಕಾರ ಹಾಗೂ ಬಣ್ಣಗಾರಿಕೆಗೆ ತನ್ನ ಸಂಗಡಿಗರಿಗೆ ಸಹಕರಿಸುವುದು.
3. ತಾಂತ್ರಿಕ ಸಿದ್ಧತೆಗಳು:– ಮಂಡಲ ಬರೆಯುವುದು, ಕಡಿಯಕಳ(ಬಲಿ ನೀಡುವ ಸ್ಥಳ)ವನ್ನು ಶುದ್ಧೀಕರಿಸುವುದು, ತಟ್ಟ್‌ತಡೆಯನ್ನು ನಿರ್ಮಿಸುವುದು, ದೈವದ ಆಭರಣ, ಆಯುಧ ಮತ್ತು ಮೊಗ(ಮುಖವಾಡ)ವನ್ನು ಕೋಟ(ಗುಡಿ)ಯಿಂದ ತರುವುದು. ಈ ಕಾರ್ಯಗಳನ್ನು ತೆರೆಕಾರ ಹಾಗು ಆತನ ಸಂಗಡಿಗರು ಮಾಡುತ್ತಾರೆ.
4. ವಿಶಿಷ್ಟವಾದ ಬಣ್ಣಗಾರಿಕೆ ಮತ್ತು ವೇಷಭೂಷಣಗಳಿಂದ ಅಲಂಕರಿಸಿಕೊಂಡು ಚಲ್‌ಂಬು(ಕಾಲಿಗೆ ಧರಿಸುವ ಆಭರಣ) ಧರಿಸಿ ಸಿದ್ಧನಾದ ತೆರೆಕಾರನು ಅಲೌಕಿಕವಾದ ದೈವಗಳ ಪ್ರತೀಕವಾಗಿ ಕಾಣಿಸಿಕೊಳ್ಳುವುದು.

ಇಲ್ಲಿ ಜನಪದರು ತೆರೆಕಾರನು ಹಾಕಿದ ದೈವವೇಷದ ಮಾಧ್ಯಮದ ಮೂಲಕ ತಮ್ಮ ಕಲ್ಪನೆಯ ದೈವಗಳನ್ನು ವಾಸ್ತವದಲ್ಲಿ ಕಾಣುತ್ತಾರೆ. ಹಲವು ವಿಧದ ಕುಣಿತ, ಅಟ್ಟಹಾಸ, ಹಾವಭಾವದ ಮೂಲಕ ದೈವಗಳು ತಮ್ಮ ಸಂತೃಪ್ತಿಯನ್ನು ವ್ಯಕ್ತಪಡಿಸುತ್ತವೆ ಎಂಬುದು ಜನಪದರ ನಂಬಿಕೆಯಾಗಿದೆ. ತೆರೆಗಳಿಗೆ ಹೋಗುವಾಗ ಮದ್ಯ ಹಾಗು ಕೋಳಿಯನ್ನು ಕಾಣಿಕೆಯ ರೂಪದಲ್ಲಿ ಒಪ್ಪಿಸುತ್ತಾರೆ. ಅವರು ನೀಡಿದ ಆಹಾರವನ್ನು ದೈವವು ಬಾರಣಿಯ ರೂಪದಲ್ಲಿ ಸ್ವೀಕರಿಸುತ್ತದೆ. ತನ್ನ ಸಂತೃಪ್ತಿಯನ್ನು, ಮೆಚ್ಚುಗೆಯನ್ನು ಮಾತಿನ ಮೂಲಕ ವ್ಯಕ್ತಪಡಿಸುತ್ತದೆ. ದೈವವು ಚಂಡೆ ಅಥವಾ ಮದ್ದಳೆಯ ಹಿಮ್ಮೇಳಕ್ಕೆ ಆವೇಷದಿಂದ ಕುಣಿಯುತ್ತದೆ. ತನ್ನ ಮಹಿಮೆಯನ್ನು ಪ್ರದರ್ಶಿಸುತ್ತಾ ಮಾತನಾಡುತ್ತಾ, ಜನಪದರ ಕಷ್ಟಗಳಿಗೆ ಪರಿಹಾರ ನೀಡುತ್ತದೆ. ಅಭಯದ ಮಾತುಗಳ ಮೂಲಕ ಜನಪದರಿಗೆ ಹತ್ತಿರವಾಗುತ್ತದೆ.

4. ತೆರೆ ಬಾಂಗುವೊ:– ತೆರೆಯ ಮುಕ್ತಾಯದ ಹಂತವಿದು. ಈ ಹಂತದಲ್ಲಿ ವ್ಯಕ್ತಿ ಮಾಧ್ಯಮವನ್ನು ಬಿಟ್ಟು ದೈವವು ಅಗೋಚರವಾಗುತ್ತದೆ. ಕಡಿಯಕಳದಲ್ಲಿ ರಕ್ತಬಲಿಯನ್ನು ನೀಡಿದ ನಂತರ ತೆರೆಬಾಂಗುವೊ ವಿಧಿ ನಡೆಯುತ್ತದೆ. ಅನಂತರ ಭಂಡಾರ ಮತ್ತು ಮೊಗವನ್ನು ಮೂಲಸ್ಥಾನವಾದ ಕೋಟದಲ್ಲಿ ಇರಿಸಿದರೆ ತೆರೆಆಚರಣೆ ಮುಗಿಯಿತೆಂದು ಜನಪದರು ಭಾವಿಸುತ್ತಾರೆ.

ತೆರೆಕಟ್ಟುವ ಆಚರಣೆಯ ವಿಧಿವಿಧಾನಗಳನ್ನು ನಿರೂಪಿಸುವ ಲಿಖಿತ ದಾಖಲೆಗಳು ಇಲ್ಲ. ತೆರೆಕಟ್ಟುವ ಪರಂಪರೆಯು ತಲೆಮಾರಿನಿಂದ ತಲೆಮಾರಿಗೆ ಸಾಗುತ್ತಾ ಬಂದಿದೆ. ಪ್ರತಿಯೊಂದು ದೈವಕ್ಕೂ ವಾರ್ಷಿಕವಾಗಿ, ಎರಡು ವರ್ಷಗಳಿಗೊಮ್ಮೆ, ಐದು ವರ್ಷಗಳಿಗೊಮ್ಮೆ ಉತ್ಸವವು ನಡೆಯುತ್ತದೆ. ಆದುದರಿಂದ ಈ ಆವರ್ತನವು ಆಚರಣೆಯ ವಿಧಿವಿಧಾನಗಳನ್ನು ವ್ಯತಾಸವಾಗದಂತೆ ಉಳಿಸಿಕೊಂಡು ಬಂದಿದೆ.

**ನಮ್ಮೆ ಕುರಿಪೊ(ಹಬ್ಬದ ದಿನ ನಿಗಧಿಗೊಳಿಸುವುದು)**

ಇದು ತೆರೆಕಟ್ಟುವ ಆಚರಣೆಯ ಆರಂಭಿಕ ವಿಧಿ. ಎಲ್ಲಾ ದೈವಗಳ ತೆರೆಗಳಲ್ಲಿ ಹಾಗೂ ಕೊಡಗಿನಲ್ಲಿ ತೆರೆಕಟ್ಟುವ ಆಚರಣೆ ನಡೆಯುವ ಎಲ್ಲಾ ಊರುಗಳಲ್ಲಿ ಈ ವಿಧಿಯು ನಡೆಯುತ್ತದೆ. ಒಕ್ಕ(ಕುಟುಂಬ) ತೆರೆಗಳಾದರೆ ಒಕ್ಕದ ಪಟ್ಟೆದಾರ(ಮುಖ್ಯಸ್ಥ) ಮತ್ತು ಇತರ ಸದಸ್ಯರು ಈ ವಿಧಿಯನ್ನು ನಡೆಸುತ್ತಾರೆ. ಊರಿನ ತೆರೆಗಳಾದರೆ ಊರಿನ ತಕ್ಕ ಮುಖ್ಯಸ್ಥರೆಲ್ಲ ಒಂದೆಡೆ ಸೇರಿ ದಿನ ನಿಗಧಿಗೊಳಿಸುತ್ತಾರೆ. ಅಂದಿನಿಂದ ಹಬ್ಬದ ಕಟ್ಟುಕಟ್ಟಳೆಗಳು ಜಾರಿಯಾಗುತ್ತವೆ.

**ವೀಳ್ಯ ಕೊಡ್‌ಪೊ(ವೀಳ್ಯ ಕೊಡುವುದು)**

ತೆರೆಕಟ್ಟುವ ಆಚರಣೆಯನ್ನು ನಡೆಸಿಕೊಡುವಂತೆ ತೆರೆಕಾರರನ್ನು ಆಹ್ವಾನಿಸುವ ವಿಧಿ ವೀಳ್ಯ ಕೊಡ್‌ಪೊ. ಒಕ್ಕತೆರೆಗಳಾದರೆ ಒಕ್ಕದ ಅಥವಾ ಊರಿನ ತಕ್ಕ ಮುಖ್ಯಸ್ಥರು ತೆರೆಕಾರನ ಮನೆಗೆ ತೆರಳುತ್ತಾರೆ. ಆತನ ಮನೆಯ ನೆಲ್ಲಕ್ಕಿ ನಡುಬಾಡೆಯಲ್ಲಿ ಉರಿಯುತ್ತಿರುವ ದೀಪದ ಮುಂದೆ ನಿಂತು ದೇವರನ್ನು ಸ್ತುತಿಸಿ ನಾಲ್ಕು ಮಾತನಾಡುತ್ತಾರೆ. ಅನಂತರ ಮೂರು ವೀಳ್ಯದೆಲೆಯ ಮೇಲೆ ಮೂರು ಅಡಿಕೆಯನ್ನು ಇರಿಸಿ ಅದನ್ನು ತೆರೆಕಾರನಿಗೆ ನೀಡುತ್ತಾರೆ. ನಿಗಧಿತ ದಿನದಂದು ತೆರೆಕಟ್ಟುವ ಆಚರಣೆಯನ್ನು ಸುಸೂತ್ರವಾಗಿ ನಡೆಸಿಕೊಡುವಂತೆ ಆಹ್ವಾನ ನೀಡುತ್ತಾರೆ.

ಪಾರಂಪರಿಕ ಕ್ರಮದಂತೆ ಪೂರ್ವದಲ್ಲಿ ಕೊಡಗಿನಲ್ಲಿ ಊಮೆ ಪದ್ಧತಿ ಇತ್ತು. ಅದರ ಪ್ರಕಾರ ತೆರೆಕಟ್ಟುವ ಸಮುದಾಯದವರು ಆಯಾ ಊರಿನಲ್ಲಿ ನೆಲೆಸುತ್ತಿದ್ದರು. ಊರಿನವರು ತೆರೆಕಟ್ಟುವ ಕಾರ್ಯಕ್ಕಾಗಿ ಇಂತಿಷ್ಟು

ಜಮೀನನ್ನು ರೂಢಿಸಿಕೊಳ್ಳಲು ನೀಡುತ್ತಿದ್ದರು. ಇದಕ್ಕೆ ಪ್ರತಿಯಾಗಿ ಊರಿನ ತೆರೆಗಳು, ಊರಿನಲ್ಲಿರುವ ಒಕ್ಕದ ತೆರೆಗಳನ್ನು ಕಟ್ಟಬೇಕಾಗಿತ್ತು. ಕೆಲವು ಊರುಗಳಲ್ಲಿ ತೆರೆಕಟ್ಟುವವರಿಗೆ ವಾರ್ಷಿಕವಾಗಿ ಭತ್ತವನ್ನು ನೀಡುತ್ತಾರೆ.

ನೂರು ಬಟ್ಟಿ ಭೂಮಿಗೆ ಒಂದುಪರೆ(ಹತ್ತು ಸೇರು) ಭತ್ತವನ್ನು ವಾರ್ಷಿಕವಾಗಿ ನೀಡಲಾಗುತಿತ್ತು. ಕೆಲವು ಊರುಗಳಲ್ಲಿ ಇದು ಇಪ್ಪತ್ತೊಂದು ಸೇರಿನವರೆಗೆ ವ್ಯಾಪಿಸುತ್ತದೆ. ಇಂದು ಭತ್ತದ ಸ್ಥಾನವನ್ನು ಹಣ ಆಕ್ರಮಿಸಿಕೊಂಡಿದೆ. ತೆರೆಯೊಂದಕ್ಕೆ ಹತ್ತರಿಂದ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಸಂಭಾವನೆಯಾಗಿ ಪಡೆಯುವ ತೆರೆಕಾರರಿದ್ದಾರೆ. ಹಿಂದೆ ಆಯಾ ಊರಿನ ತೆರೆಗಳನ್ನು ಅಲ್ಲಿನ ತೆರೆಕಟ್ಟುವ ಸಮುದಾಯದವರೇ ಕಟ್ಟಬೇಕೆಂಬ ನಿಯಮವಿತ್ತು. ಆದರೆ ಪ್ರಸ್ತುತ ದಿನಗಳಲ್ಲಿ ತೆರೆಕಟ್ಟುವ ಸಮುದಾಯದವರು ತಮ್ಮ ಮೂಲ ಕಸುಬನ್ನು ತ್ಯಜಿಸಿ ಇತರ ಕೆಲಸಗಳತ್ತ ವಾಲುತ್ತಿದ್ದಾರೆ. ಹಾಗಾಗಿ ಒಬ್ಬನೇ ವ್ಯಕ್ತಿ ಹಲವು ತೆರೆಗಳನ್ನು ಕಟ್ಟುವ ಪರಿಸ್ಥಿತಿ ನಿರ್ಮಾಣವಾಗಿದೆ.

**ಕೊಲೆ ಕೆತ್ತುವೊ(ಗೊನೆ ಕಡಿಯುವುದು)**

ತೆರೆಕಟ್ಟುವ ಆಚರಣೆಗೆ ಅವಶ್ಯಕವಾದ ಬಾಳೆಗೊನೆಯನ್ನು ಕಡಿಯುವ ವಿಧಿಯನ್ನು ಕೊಲೆ ಕೆತ್ತುವೊ ಎನ್ನುತ್ತಾರೆ. ತೆರೆಕಾರನಿಗೆ ವೀಳ್ಯ ನೀಡಿದ ನಂತರ ಐದು, ಏಳು ಅಥವಾ ಒಂಬತ್ತು ದಿನಗಳಿಗೆ ಮುಂಚಿತವಾಗಿ ಈ ವಿಧಿಯನ್ನು ನಡೆಸಲಾಗುತ್ತದೆ. ಒಕ್ಕ ತೆರೆಗಳಾದರೆ ಆಯಾ ಒಕ್ಕ(ಕುಟುಂಬ)ದ ಪಟ್ಟೆದಾರ(ಮುಖ್ಯಸ್ಥ) ಮಿಂದು ಶುಚೀರ್ಭೂತನಾಗಿ ಬಾಳೆಗೊನೆ ಕಡಿಯುತ್ತಾನೆ. ಕಡಿದ ಬಾಳೆಗೊನೆಯನ್ನು ಒಕ್ಕದ ಐನ್‌ಮನೆ (ಕುಟುಂಬದ ಮೂಲಮನೆ)ಯ ಕನ್ನಿಕೋಂಬರೆ(ದೇವರಿಗೆ ಎಡೆ ಇಡುವ ಕೋಣೆ)ಯಲ್ಲಿ ಅಥವಾ ದೈವದ ಕೋಟ(ಗುಡಿ)ಯಲ್ಲಿ ಕಟ್ಟುತ್ತಾರೆ. ಊರಿನ ತೆರೆಗಳಾದರೆ ಊರ್‌ತಕ್ಕ(ಊರಿನ ಮುಖ್ಯಸ್ಥ), ದೇವತಕ್ಕ(ದೇವಸ್ಥಾನದ ಮುಖ್ಯಸ್ಥ) ಭಂಡಾರತಕ್ಕ (ಭಂಡಾರ ಮುಖ್ಯಸ್ಥ)ರೊಂದಿಗೆ ಊರಿನವರೆಲ್ಲಾ ಸೇರಿ ನಡೆಸುತ್ತಾರೆ. ಕೊಲೆಕೆತ್ತುವೊ ವಿಧಿಯ ನಂತರ ತೆರೆಕಟ್ಟುವ ಆಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಜನರು ಹಾಗು ಊರಿನವರು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಈ ವಿಧಿಯ ನಂತರ ಮನೆಯಲ್ಲಿ ಇತರ ಸಮಾರಂಭಗಳನ್ನು ಇಟ್ಟುಕೊಳ್ಳಬಾರದೆಂಬ ನಿಯಮವಿದೆ. ಗೊನೆ ಕಡಿದು ತಂದ ಬಾಳೆಗೊನೆಯ ಹಣ್ಣುಗಳನ್ನು ದೈವದ ಬಾರಣೆಗೆ ಉಪಯೋಗಿಸಬೇಕೆಂಬ ನಿಯಮವಿದೆ. ಆಚರಣೆಗೆ ಬಾಳೆಹಣ್ಣುಗಳು ಅಗತ್ಯವಾದುದರಿಂದ ಮುಂಚಿತವಾಗಿಯೇ ಗೊನೆಯನ್ನು ಕಡಿದು ಇಡುವ ಕ್ರಿಯೆಗೆ ಧಾರ್ಮಿಕತೆಯ ಅಂಶ ಸೇರಿಕೊಂಡಿದೆ ಎನ್ನಬಹುದು.

**ಭಂಡಾರ ಉಳ್‌ಪೊ(ಭಂಡಾರ ಇಳಿಸುವುದು)**

ದೈವದ ಭಂಡಾರ ಇಳಿಸುವ ವಿಧಿಯನ್ನು ಭಂಡಾರ ಉಳ್‌ಪೊ ಎನ್ನುತ್ತಾರೆ. ಭಂಡಾರದಲ್ಲಿ ದೈವದ ಆಯುಧಗಳು, ಆಭರಣಗಳು ಮತ್ತು ಮೊಗ(ಮುಖವಾಡ) ಇರುತ್ತದೆ. ವಾದ್ಯ ಮತ್ತು ದುಡಿ ಕೊಟ್ಟ್‌ಪಾಟ್ (ದುಡಿಯೆಂಬ ವಾದ್ಯವನ್ನು ಬಾರಿಸುತ್ತಾ ಹಾಡುವುದು) ನೊಂದಿಗೆ ಈ ವಿಧಿಯನ್ನು ನಡೆಸುತ್ತಾರೆ. ತಕ್ಕಮುಖ್ಯಸ್ಥರು ಹಾಗು ಗ್ರಾಮಸ್ಥರು ಇಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

**ಕೋಟ/ಕೊಟ್ಟ (ಗುಡಿ)**

ತೆರೆ ಆಚರಣೆಯಲ್ಲಿ ಆರಾಧಿಸಲ್ಪಡುವ ದೈವಗಳು ಅಲೌಕಿಕವಾಗಿ ವಾಸಿಸುವ ಸ್ಥಳವನ್ನು ಕೋಟ ಎನ್ನುತ್ತಾರೆ. ಇದನ್ನು ಕೊಟ್ಟ ಎಂದೂ ಕರೆಯುವುದುಂಟು. ಚೌಂಡಿ, ವಿಷ್ಣುಮೂರ್ತಿ, ಕುಳಿಯಮೆ ಚೌಂಡಿ,

ಅಜ್ಜಪ್ಪ, ಕಳಿಚೌಂಡಿ ದೈವಗಳಿಗೆ ಕೋಟಗಳಿವೆ. ಆಯತ ಅಥವಾ ಚೌಕಾಕಾರವಾಗಿರುವ ಕೋಟಗಳು ಚಿಕ್ಕ ಗುಡಿಯಂತಿರುತ್ತವೆ. ಸಾಮಾನ್ಯವಾಗಿ ಕೋಟಗಳನ್ನು ಎತ್ತರವಾದ ಪ್ರದೇಶಗಳಲ್ಲಿ ನಿರ್ಮಿಸಲಾಗಿರುತ್ತದೆ. ದೈವವು ಎತ್ತರದ ಸ್ಥಾನದಲ್ಲಿ ನಿಂತು ತನ್ನ ವ್ಯಾಪ್ತಿಯ ಪ್ರದೇಶವನ್ನು, ಅಲ್ಲಿನ ಜನ ಜಾನುವಾರುಗಳನ್ನು ಕಾಪಾಡುತ್ತದೆ ಎಂಬ ಜನಪದರ ಆಶಯವನ್ನು ಇಲ್ಲಿ ಗಮನಿಸಬಹುದು.

**ಎಣ್ಣೆ ಕೊಡ್‌ಪೊ(ಎಣ್ಣೆ ನೀಡುವುದು) ಮತ್ತು ಸ್ನಾನದ ವಿಧಿ**

ಇದು ತೆರೆಕಟ್ಟುವ ಆಚರಣೆಯ ಮುಖ್ಯವಾದ ವಿಧಿಯಾಗಿದೆ. ಒಕ್ಕದ ಅಥವಾ ಊರಿನ ತಕ್ಕ ಮುಖ್ಯಸ್ಥನು ತೆರೆಕಾರನಿಗೆ ಎಣ್ಣೆಯನ್ನು ನೀಡಿ ತೆರೆಕಟ್ಟಲು ನೀಡುವ ಅನುಮತಿ ಇದಾಗಿದೆ. ತಕ್ಕ ಮುಖ್ಯಸ್ಥರಿಗೆ ಗೌರವ ಸಲ್ಲಿಸುವ ತೆರೆಕಾರನು ಎಣ್ಣೆಯನ್ನು ಸ್ವೀಕರಿಸುತ್ತಾನೆ. ಈ ಸಂದರ್ಭದಲ್ಲಿ "ಎಣ್ಣೆಯನ್ನು ಪಡೆದುಕೊಳ್ಳುವೆ" ಎಂದು ಎರಡು ಬಾರಿ ಹೇಳಿ ಪಡೆದುಕೊಳ್ಳುತ್ತಾನೆ. ಪಡೆದುಕೊಂಡ ಎಣ್ಣೆಯನ್ನು ತಲೆ ಮತ್ತು ದೇಹಕ್ಕೆ ಹಚ್ಚಿಕೊಂಡು ಸ್ನಾನಕ್ಕೆ ತೆರಳುತ್ತಾನೆ. ಸ್ನಾನ ಮುಗಿಸಿದ ನಂತರ ತೆರೆಕಾರನು ಬಣ್ಣಗಾರಿಕೆಗೆ ಸಿದ್ಧನಾಗುತ್ತಾನೆ.

**ತೆರೆಕುರಿಪೊ(ಬಣ್ಣಗಾರಿಕೆ)**

ತೆರೆಕಟ್ಟುವ ಆಚರಣೆಯಲ್ಲಿ ಬಣ್ಣಗಾರಿಕೆ ಪ್ರಮುಖ ಪಾತ್ರ ವಹಿಸುತ್ತದೆ. ತೆರೆಕಟ್ಟುವವರು ಬಣ್ಣದಿಂದ ಮಾಡುವ ಕೆಲಸವನ್ನು 'ತೆರೆಕುರಿಪೊ' ಎಂದು ಹೇಳುತ್ತಾರೆ. ಹಳದಿ, ಕೆಂಪು ಹಾಗೂ ಕಪ್ಪು ಬಣ್ಣಗಳನ್ನು ಮುಖವರ್ಣಿಕೆಯ ಕೆಲಸಕ್ಕೆ ಬಳಸುತ್ತಾರೆ. ಈ ಬಣ್ಣಗಳನ್ನು ಚೇಲಮಣಲೆ, ಚಾಯಿಲೆ ಮಣಲೆ ಅಥವಾ ಅರ್ದಲ ಎನ್ನುತ್ತಾರೆ. ಹಳದಿ ಬಣ್ಣವು ತಳಹದಿಯ ಬಣ್ಣವಾಗಿ ಬಳಕೆಯಾಗುತ್ತದೆ. ದೈವಕ್ಕೆ ಕೈ ಮುಗಿದು ಪ್ರಾರ್ಥಿಸಿದ ನಂತರ ತೆರೆಕಾರನು ಹಳದಿ ಬಣ್ಣವನ್ನು ಮುಖಕ್ಕೆ ಮತ್ತು ದೇಹಕ್ಕೆ ಲೇಪಿಸಿಕೊಳ್ಳುತ್ತಾನೆ. ಬಣ್ಣಗಾರಿಕೆಗೆ ಮುಖ್ಯವಾಗಿ ಮುಖವನ್ನು ಬಳಸುತ್ತಾರೆ. ಮುಖವು ದೇಹದಲ್ಲಿ ಎದ್ದು ಕಾಣುವ ಅಂಗವಾಗಿದೆ. ವ್ಯಕ್ತಿಯಾಗಲಿ ವಿಗ್ರಹವಾಗಲಿ ನಾವು ಮೊದಲು ನೋಡುವುದು ಮುಖವನ್ನು. ತೆರೆಕಾರರಿಗೆ ಮುಖವೆಂಬುದು ಚಿತ್ರಪಟವಿದ್ದಂತೆ. ಆದುದರಿಂದ ತೆರೆಕಟ್ಟುವ ಆಚರಣೆಯಲ್ಲಿ ಮುಖವರ್ಣಿಕೆಯ ಸಂದರ್ಭದಲ್ಲಿ ದೈವಗಳ ಕಥೆ ಹಾಗೂ ಅವುಗಳ ಸ್ವಭಾವಕ್ಕೆ ಅನುಗುಣವಾದ ಬಣ್ಣಗಾರಿಕೆ ಮತ್ತು ರೇಖಾವಿನ್ಯಾಸಗಳನ್ನು ನಿರ್ವಹಿಸುತ್ತಾರೆ. ದೈವಗಳ ಉಗ್ರತೆ, ಕ್ರೂರ ಸ್ವಭಾವ, ಅತಿಮಾನುಷ ಗುಣ, ಅತಿಮಾನುಷ ವ್ಯಕ್ತಿತ್ವವನ್ನು ಕಡುಕೆಂಪು ಬಣ್ಣ ಮತ್ತು ವಕ್ರರೇಖಾ ವಿನ್ಯಾಸಗಳಿಂದ ಚಿತ್ರಿಸಲಾಗುತ್ತದೆ. ಸೌಮ್ಯ ಸ್ವಭಾವದ ದೈವಗಳಿಗೆ ಮೆದು ಬಣ್ಣ ಮತ್ತು ಸರಳರೇಖಾ ವಿನ್ಯಾಸಗಳನ್ನು ಬಳಸುತ್ತಾರೆ. ಚೌಂಡಿ, ನರಿಪೂದ, ಕರಿಚೌಂಡಿ, ಪುಲಿಚೌಂಡಿ, ವಿಷ್ಣುಮೂರ್ತಿ ದೈವಗಳಿಗೆ ಕಡುಬಣ್ಣವನ್ನು ಬಳಸಲಾಗುತ್ತದೆ. ಕೆಲವು ದೈವಗಳ ಮುಖವರ್ಣಿಕೆಯಲ್ಲಿ ಅವುಗಳ ಸ್ವಭಾವ ಚಿತ್ರಣ ಮತ್ತು ಧಾರ್ಮಿಕ ಪ್ರಭಾವವನ್ನು ಗುರುತಿಸಬಹುದು.

**ವೇಷ ಭೂಷಣಗಳು**

ತೆರೆಕುರಿಪೊ ವಿಧಿಯ ನಂತರ ತೆರೆಕಾರನಿಗೆ ದೈವದ ವೇಷಭೂಷಣಗಳನ್ನು ಕಟ್ಟಿಕೊಡುತ್ತಾರೆ. ಲೋಹ, ತೆಂಗಿನ ಚಿಗುರು, ಅಡಿಕೆಹಾಳೆ, ಪಾಂಬಳೆ(ಕತ್ತಾಳೆ ಜಾತಿಗೆ ಸೇರಿದ ಗಿಡ), ಮರ, ಓಟೆ, ಬಿದಿರು ಮತ್ತು ಬಟ್ಟೆಯ ಅಲಂಕಾರ ಸಾಮಗ್ರಿಗಳನ್ನು ಈ ಕಾರ್ಯದಲ್ಲಿ ಬಳಸಲಾಗುತ್ತದೆ. ಈ ಅಲಂಕಾರ ಸಾಮಗ್ರಿಗಳಲ್ಲಿ ಚಿನ್ನ, ಬೆಳ್ಳಿಯಂತಹ ಬೆಲೆಬಾಳುವ ಸಾಮಗ್ರಿಗಳು ತೆರೆಕಟ್ಟುವ ಆಚರಣೆಯನ್ನು ನಡೆಸುವ ಮೇಲ್ವರ್ಗದವರ ವಶದಲ್ಲಿರುತ್ತವೆ. ಮರ, ಹಾಳೆ, ಇತರ ಲೋಹ ಹಾಗು ಬಟ್ಟೆಯ ಸಾಮಗ್ರಿಗಳು ತೆರೆಕಟ್ಟುವವರ ಬಳಿ ಇರುತ್ತವೆ. ಹೊತ್ತು ಸಾಗಿಸಲು ಅನುಕೂಲವಾಗುವಂತೆ ಅಲಂಕಾರ ಸಾಮಗ್ರಿಗಳನ್ನು ತೆರೆಕಟ್ಟುವವರು ತಯಾರು ಮಾಡಿಟ್ಟುಕೊಳ್ಳುತ್ತಾರೆ. ಆಯುಧಗಳು, ಆಭರಣ ಮತ್ತು ಮುಖವಾಡಗಳನ್ನು ಲೋಹದಿಂದ ತಯಾರಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಹಾಳೆಯ ಮುಖವಾಡಗಳನ್ನು ಬಳಸಲಾಗುತ್ತದೆ. ತೆರೆಕಟ್ಟುವ ಆಚರಣೆಯ ವೇಷಭೂಷಣಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.

1. ಆಭರಣಗಳು
2. ಆಯುಧಗಳು
3. ಮುಖವಾಡಗಳು
4. ಅಲಂಕಾರ ಸಾಮಗ್ರಿಗಳು ಮತ್ತು ಶಿರೋಭೂಷಣಗಳು

**ಆಭರಣಗಳು**

ತಲೆ, ನೆತ್ತಿ, ಕಣ್ಣು, ಕಿವಿ, ಬಾಯಿ, ಕೊರಳು, ಎದೆ, ತೋಳು, ಮುಂಗೈ, ಸೊಂಟ, ಕಾಲುಗಳಿಗೆ ಸಂಬಂಧಿಸಿದ ಆಭರಣಗಳು ತೆರೆಕಟ್ಟುವ ಆಚರಣೆಯಲ್ಲಿ ಬಳಕೆಯಾಗುತ್ತವೆ. ತಲೆಗೆ ತಲಪಾಳಿ, ತಲಪಾಳಿ ಪಟ್ಟ ಮತ್ತು ತಲೆಪೂ, ಹಣೆಗೆ ಚಂದ್ರಕಲೆ ಮತ್ತು ನೆತ್ತಿಬೊಟ್ಟ್, ಕಣ್ಣಿಗೆ ಪೊಯ್‌ಕಣ್ಣ್, ಬಾಯಿಗೆ ಎದ್‌ರ್ ಎಂಬ ಕಂಚಿನ ಕೋರೆ, ಕಿವಿಗೆ ಚೆನ್ನಿರ್‌ಲ್ ಅಥವಾ ಚೆನ್ನಿಮಲರ್, ವಾಲೆಕಾದ್, ಕಿವಿಯ ಕೆಳಭಾಗಕ್ಕೆ ಕೊಂಬೋಲೆ ಕಾದ್, ಕುತ್ತಿಗೆಗೆ ಕಲತ್‌ಕೆಟ್ಟ್ ಎಂಬ ಮರದ ಪದಕ, ಪವ್ವಿಡ ಮತ್ತು ಬನಮಾಲೆ, ತೋಳಿಗೆ ಮರದಿಂದ ತಯಾರಿಸಿದ ಬಳೆ, ಮುಂಗೈಗೆ ಕಂಚಿನ ಚೂಡಗ, ಮೊಣಕಾಲಿನ ಕೆಳಭಾಗಕ್ಕೆ ಮಣಿಕೇರ್, ಕಾಲಿಗೆ ಚಲ್‌ಂಬು- ಈ ಬಗೆಯ ಆಭರಣಗಳು ಬಳಕೆಯಾಗುತ್ತವೆ. ದೈವವು ಹೆಣ್ಣು ಎಂಬುದನ್ನು ಸೂಚಿಸಲು ಕೆಲವು ತೆರೆಗಳಲ್ಲಿ ಮೊಲೆಕೆಟ್ಟ್ ತೊಡಲಾಗುತ್ತದೆ. ಪ್ರಮುಖ ದೈವಗಳಿಗೆ ಹೆಚ್ಚು ಆಭರಣಗಳನ್ನು ಧರಿಸಲಾಗುತ್ತದೆ. ಒಂದು ದೈವಕ್ಕೆ ಕನಿಷ್ಠ ಕೆಲವು ಆಭರಣಗಳು ಇರಲೇಬೇಕಾಗುತ್ತದೆ. ಕೆಲವು ಊರುಗಳಲ್ಲಿ ಲೋಹದ ಆಭರಣಗಳು ಇಲ್ಲದಿದ್ದಾಗ ಮರದ ಆಭರಣವನ್ನು, ಹಾಳೆಗಳಿಂದ ತಯಾರಿಸಿದ ಆಭರಣಗಳನ್ನು ಬಳಸುತ್ತಾರೆ. ಹೆಣ್ಣು ಗಂಡೆಂಬ ಭೇದವಿಲ್ಲದೆ ಎಲ್ಲಾ ಬಗೆಯ ಆಭರಣಗಳನ್ನು ದೈವಗಳಿಗೆ ತೊಡಿಸಲಾಗುತ್ತದೆ.

**ಚಲ್‌ಂಬು ಧರಿಸುವುದು**

ತೆರೆಯ ಆಭರಣಗಳಲ್ಲಿ ಚಲ್‌ಂಬು ಪ್ರಮುಖವಾದುದು. ಕಾಲಿಗೆ ಕಟ್ಟಿಕೊಳ್ಳುವ ದೊಡ್ಡದಾದ ಗೆಜ್ಜೆಯಂತೆ ಶಬ್ದ ಮಾಡುವ ಸಾಧನವನ್ನು ಚಲ್‌ಂಬು ಎನ್ನುತ್ತಾರೆ. ಕಾಲಿಗೆ ಚಲ್‌ಂಬು ಕಟ್ಟಿಕೊಳ್ಳುವ ಮುನ್ನ ತೆರೆಕಾರನು ಸಮಸ್ತ ಗ್ರಾಮಸ್ಥರ ಅನುಮತಿಯನ್ನು ಕೇಳುತ್ತಾನೆ. ನೆಲ್ಲಕ್ಕಿ ನಡುಬಾಡೆಯಲ್ಲಿ ಬಾಳೆಎಲೆಯ ಮೇಲೆ ಚಲ್‌ಂಬು ವನ್ನು ಇಡಲಾಗುತ್ತದೆ. ಮುಖವರ್ಣಿಕೆ ಕೆಲಸ ಮುಗಿದ ನಂತರ ತಲೆಗೆ ತಲಪಾಳಿಯನ್ನು ಕಟ್ಟಿಕೊಳ್ಳುತ್ತಾನೆ. ಚಂಡೆ ಅಥವಾ ಮದ್ದಳೆಯನ್ನು ಬಾರಿಸುತ್ತಾ ಹಾಡುಗಾರರು ತೆರೆಹಾಡು ಹಾಡುತ್ತಾರೆ. ಹಾಡು ಮತ್ತು ಚಂಡೆಯ ಬಡಿತ ಹೆಚ್ಚಾಗುತ್ತಿದ್ದಂತೆ ತೆರೆವೇಷಧಾರಿ ಚಲ್‌ಂಬುವನ್ನು ಕೈಯಲ್ಲಿ ಹಿಡಿದು ಕುಲುಕುತ್ತಾ ತೀವ್ರ ಆವೇಷದಿಂದ ಅಟ್ಟಹಾಸ ಮಾಡುತ್ತಾ ಕುಣಿಯುತ್ತಾನೆ. ಅನಂತರ ಕಾಲಿಗೆ ಧರಿಸಿಕೊಳ್ಳುತ್ತಾನೆ. ಕೆಲವು ತೆರೆಗಳಲ್ಲಿ ಚಲ್‌ಂಬು ಧರಿಸಿದ ನಂತರ ಕೋತಿರಿ ಬೆಂಕಿಯಿಂದ ಎದೆ, ಕೈಗಳನ್ನು ಸುಟ್ಟುಕೊಳ್ಳುತ್ತಾರೆ. ಹೀಗೆ ದೈವಗಳು ತಮ್ಮ ಕಾರಣಿಕವನ್ನು ತೆರೆಕಾರರ ಮೂಲಕ ವ್ಯಕ್ತಪಡಿಸಿ ಜನಪದರಲ್ಲಿ ಭಯ ಮತ್ತು ನಂಬಿಕೆಯನ್ನು ಉಂಟುಮಾಡುತ್ತವೆ.

**ಆಯುಧಗಳು**

ಆಯುಧಗಳು ತೆರೆಕಟ್ಟುವ ಆಚರಣೆಯ ಪೌರುಷದ ಚಿತ್ರಣವನ್ನು ವೈಭವೀಕರಿಸುವಲ್ಲಿ ಸಹಾಯಕವಾಗಿದೆ. ದೈವಗಳು ಹಿಡಿಯುವ ಕತ್ತಿಯನ್ನು ಕಡ್ತಲೆ ಎಂದು ಕರೆಯುತ್ತಾರೆ. ಕಡಿ ತಲೆ– ತಲೆಯನ್ನು ಕಡಿಯಲು ಉಪಯೋಗಿಸುವ ಕತ್ತಿ ಎಂಬ ಅರ್ಥವನ್ನು ನೀಡುತ್ತದೆ. ದೈವಗಳನ್ನು ತಮ್ಮ ಮೇಲೆ ಆವಾಹಿಸಿಕೊಳ್ಳುವ ತಿರುವಳಕಾರರೂ ಕಡ್ತಲೆಯನ್ನು ಬಳಸುತ್ತಾರೆ. ಕಡ್ತಲೆ, ಬೆತ್ತ, ಬಿಲ್ಲು ಬಾಣ, ಪರಿಯ(ಒಂದು ರೀತಿಯ ಗುರಾಣಿ), ಗಂಟೆ ಇವು ತೆರೆಕಟ್ಟುವ ಆಚರಣೆಯಲ್ಲಿ ಸಾಮಾನ್ಯವಾಗಿ ಬಳಸುವ ಆಯುಧಗಳಾಗಿವೆ. ವಿಷ್ಣುಮೂರ್ತಿ ಹಾಗೂ ಚೌಂಡಿ ದೈವಗಳು ಕಡ್ತಲೆಯನ್ನು ಹಿಡಿದುಕೊಳ್ಳುತ್ತವೆ. ಜನಪದ ವೀರನಾದ ಅಜ್ಜಪ್ಪ ತೆರೆಯ ಸಂದರ್ಭದಲ್ಲಿ ಕಡ್ತಲೆಯ ಬದಲು ಒಡಿಕತ್ತಿಯೆಂಬ ದೊಡ್ಡಕತ್ತಿಯನ್ನು ಬಳಸುತ್ತಾರೆ. ಅಂಗೈ ಅಗಲದ ಅಲಗು ಹಾಗೂ ಬಲವಾದ ಹಿಡಿಯ ಈ ಕತ್ತಿಯನ್ನು ಕೊಡವರ ಮದುವೆಯಲ್ಲಿ ಬಾಳೆ ಬಿರುದು ಸ್ವೀಕರಿಸುವ ಶಾಸ್ತ್ರದಲ್ಲಿ ಬಾಳೆಯ ದಿಂಡುಗಳನ್ನು ಕತ್ತರಿಸಲು ಉಪಯೋಗಿಸುತ್ತಾರೆ. ಕಡ್ತಲೆ, ಒಡಿಕತ್ತಿ, ಪರಿಯವನ್ನು ಹಿಡಿದು ಮುಖವಾಡವನ್ನು ಧರಿಸಿ ತೆರೆಕಾರನು ಉಗ್ರವಾಗಿ ನರ್ತಿಸುವ ರೀತಿ ಯುದ್ಧದ ಹೋರಾಟವನ್ನು ನೆನಪಿಸುತ್ತದೆ. ಕಡ್ತಲೆಯನ್ನು ಝಳಪಿಸುವುದು, ವಿಭಿನ್ನ ರೀತಿಯಲ್ಲಿ ತಿರುಗಿಸುತ್ತಾ ಅಟ್ಟಹಾಸ ಮಾಡುವುದು ಇವುಗಳೆಲ್ಲಾ ದೈವವು ತನ್ನ ಸಾಹಸ ಮಹಿಮೆಯನ್ನು ಪ್ರದರ್ಶಿಸುವ, ದುಷ್ಟಶಕ್ತಿಯನ್ನು ಓಡಿಸುವ ಕಾರ್ಯಕ್ಕೆ ಸಹಾಯಕವಾಗಿದೆ.

**ಮುಖವಾಡಗಳು**

ತಲಪಾಳಿಯಂತೆ ಮುಖವಾಡವೂ ದೈವಶಕ್ತಿಯ ಪ್ರತೀಕವೆಂಬ ನಂಬಿಕೆ ಇದೆ. ಮುಖವಾಡವನ್ನು ಮೊಗ ಎಂದು ಕರೆಯುತ್ತಾರೆ. ಮೊಗ ಧರಿಸುವ ಕ್ರಿಯೆಯು ತೆರೆಕಟ್ಟುವ ಆಚರಣೆಯ ಬಹುಮುಖ್ಯ ಭಾಗವಾಗಿದೆ. ಮೊಗವು ಆಚರಣೆಯ ಸಂದರ್ಭದಲ್ಲಿ ಮಾತ್ರವಲ್ಲದೆ ಗುಡಿ ಅಥವಾ ಕೋಟದಲ್ಲಿ ಪೂಜಿಸಲ್ಪಡುತ್ತದೆ. ದೈವಗಳ ಭಂಡಾರದಲ್ಲಿ ಮೊಗ ಮತ್ತು ಆಯುಧಗಳಿರುತ್ತವೆ. ತೆರೆಕಾರನು ನಿಗಧಿತ ಕೆರೆ ಅಥವಾ ಗುಂಡಿಯಲ್ಲಿ ಸ್ನಾನ ಮಾಡಿ, ಮಡಿಯುಟ್ಟು ಮೊಗವನ್ನು ಹೊತ್ತು ತರುತ್ತಾನೆ. ಮೊಗವನ್ನು ಲೋಹ, ಮರ ಅಥವಾ ಹಾಳೆಗಳಿಂದ ನಿರ್ಮಿಸಲಾಗುತ್ತದೆ. ಚೌಂಡಿ ತೆರೆಯಲ್ಲಿ ಲೋಹದ ಮೊಗ ಬಳಕೆಯಾಗುತ್ತದೆ. ಎತ್ ತೆರೆಯಲ್ಲಿ ಅಡಿಕೆ ಹಾಳೆಯಿಂದ ಮೊಗ ನಿರ್ಮಿಸಲಾಗುತ್ತದೆ. ಒಂದು ದೈವದ ಮೊಗವನ್ನು ಮತ್ತೊಂದು ದೈವಕ್ಕೆ ಬಳಸುವಂತಿಲ್ಲ. ಮೊಗ ಮತ್ತು ಆಯುಧಗಳು ದೈವಗಳ ಖಾಸಗಿ ಸೊತ್ತಾಗಿದ್ದು; ಅವುಗಳನ್ನು ಒಂದು ಕಡೆಯಿಂದ ಮತ್ತೊಂದೆಡೆಗೆ ಸಾಗಿಸಿ ಆಚರಣೆಯಲ್ಲಿ ಬಳಸುವಂತಿಲ್ಲ.

ಸಾಮಾನ್ಯವಾಗಿ ಕೊಡಗಿನ ತೆರೆಕಟ್ಟುವ ಆಚರಣೆಗಳಲ್ಲಿ ಮನುಷ್ಯ ಹಾಗೂ ಪ್ರಾಣಿಗಳ ಮುಖವನ್ನು ಪ್ರತಿನಿಧಿಸುವ ಮೊಗಗಳನ್ನು ಬಳಸುತ್ತಾರೆ. ಹಂದಿ, ಹುಲಿ ಹಾಗೂ ಎತ್ತಿನ ಮುಖವನ್ನು ಹೋಲುವ ಮೊಗಗಳಿರುತ್ತವೆ. ಅಗಲವಾಗಿ ತೆರೆದಿರುವ ಬಾಯಿ, ಉದ್ದಕ್ಕೆ ಚಾಚಿರುವ ನಾಲಗೆ, ದಿಟ್ಟಿಸಿ ನೋಡುವ ಕಣ್ಣುಗಳು, ಕೋರೆಹಲ್ಲುಗಳು ಇತ್ಯಾದಿ ಲಕ್ಷಣಗಳನ್ನು ಹೊಂದಿದೆ. ಜನರಲ್ಲಿ ಭಯ ಹುಟ್ಟಿಸುವ, ಪೌರುಷ, ಹಿಂಸೆ, ಕ್ರೌರ್ಯ ಮೊದಲಾದ ಭಾವಗಳನ್ನು ಹುಟ್ಟಿಸುವ ಉದ್ದೇಶ ಮೊಗಗಳ ಬಳಕೆಯಲ್ಲಿ ಕಾಣಬಹುದಾಗಿದೆ.

**ಅಲಂಕಾರ ಸಾಮಗ್ರಿಗಳು ಮತ್ತು ಶಿರೋಭೂಷಣಗಳು**

ತೆರೆ ಆಚರಣೆಗೆ ಅವಶ್ಯಕವಾದ ಅಲಂಕಾರ ಸಾಮಗ್ರಿಗಳ ನಿರ್ಮಾಣ ಅತೀ ಸೂಕ್ಷ್ಮವಾದುದು. ಇವುಗಳನ್ನು ಬಟ್ಟೆ, ಮರ ಹಾಗೂ ತೆಂಗಿನ ಎಳೆಯ ಗರಿಗಳನ್ನು ಬಳಸಿ ನಿರ್ಮಿಸುತ್ತಾರೆ. ತೆರೆ ಆರಂಭವಾಗುವುದಕ್ಕೆ ಮೂರು ನಾಲ್ಕು ಗಂಟೆಗಳ ಮೊದಲು ತೆರೆಕಾರರು ತೆರೆ ನಡೆಯುವ ಸ್ಥಳಕ್ಕೆ ಬರುತ್ತಾರೆ. ತೆಂಗಿನ ಮರವೇರಿ ಒಂದು ತೆಂಗಿನ ಮರದಿಂದ ಒಂದರಂತೆ ಒಂಭತ್ತು ಚಿಗುರು ಗರಿಗಳನ್ನು ಕತ್ತರಿಸಿ ತರುತ್ತಾರೆ. ಅವುಗಳನ್ನು ಸೂಕ್ಷ್ಮವಾಗಿ ಸೀಳಿ, ಕತ್ತರಿಸಿ ಅಲಂಕಾರ ಸಾಮಗ್ರಿಗಳನ್ನು ತಯಾರಿಸುತ್ತಾರೆ. ತಲೆಗೆ ಕಟ್ಟುವ ರಚನೆಯನ್ನು 'ಕಾಂಡ' ಎನ್ನುತ್ತಾರೆ. ಅದರ ಮೇಲೆ ಕಿರೀಟದಂತೆ 'ತಲೆಮಲ್ಲಿಗೆ'ಯನ್ನು ಧರಿಸುತ್ತಾರೆ. ಕೈಬೆರಳ ಕವಚದಂತಿರುವ 'ಕೈನಗರ'; ತೋಳು ಮತ್ತು ಮುಂಗೈಗೆ ನೆರಿಗೆರೂಪದ ಬಳೆಯಂತಿರುವ 'ಪುಂಡ್ಯ'ವನ್ನು ಧರಿಸಲಾಗುತ್ತದೆ. ಎದೆಗೆ 'ಒಡೆ' ಸೊಂಟಕ್ಕೆ 'ಓಲಿ'ಯನ್ನು ಧರಿಸುತ್ತಾರೆ. ಚೌಂಡಿ, ವಿಷ್ಣುಮೂರ್ತಿ, ಕುಳಿಯ, ನುಚ್ಚುಟೆ ತೆರೆಗಳಲ್ಲಿ ಹೆಚ್ಚಾಗಿ ತೆಂಗಿನ ಗರಿಗಳಿಂದ ನಿರ್ಮಿಸಿದ ವೇಷಭೂಷಣಗಳ ಬಳಕೆ ಇದೆ.

ಕೆಲವು ತೆರೆಗಳು ಗಡ್ಡ, ಮೀಸೆ ಧರಿಸುತ್ತದೆ. ಇವುಗಳನ್ನು ಆಡಿನ ಚರ್ಮ ಅಥವಾ ಕತ್ತಾಳೆ ನಾರಿನಿಂದ ತಯಾರಿಸುತ್ತಾರೆ. ಇದರಲ್ಲಿ ಎರಡು ವಿಧ. ಕರಿಂದಾಡಿ ಮೀಸೆ(ಕಪ್ಪು ಗಡ್ಡ ಮೀಸೆ) ಹಾಗು ಬೊಳ್ಳತಾಡಿ ಮೀಸೆ(ಬಿಳಿಯ ಗಡ್ಡ ಮೀಸೆ). ಅಜ್ಜಪ್ಪ, ಕುಟ್ಟಿಚಾತ, ಕೊಡಿಬೀರ ಹಾಗು ಕಾರಣ ತೆರೆಗಳಿಗೆ ಮರದಿಂದ ನಿರ್ಮಿಸಿದ ಶಿರೋಭೂಷಣ 'ಪೂಕೊಟ್ಟಿ ಚೆಯ್ಯಾಕ್' ಧರಿಸಲಾಗುತ್ತದೆ.

ಈ ತೆರೆಗಳ ವೇಷ ಭೂಷಣಗಳಲ್ಲಿ ತೆಂಗಿನ ಗರಿಯ ಬಳಕೆ ಇಲ್ಲ. ಎಲ್ಲವನ್ನು ಮರ ಹಾಗು ಬಟ್ಟೆಯನ್ನು ಬಳಸಿ ನಿರ್ಮಿಸಲಾಗುತ್ತದೆ. ಶಿರೋಭೂಷಣವನ್ನು ಮರದಿಂದ ನಿರ್ಮಿಸಲಾಗುತ್ತದೆ. ಕೆಂಪು ಅಂಗಿ ಮತ್ತು ಷರಾಯಿಯ ಮೇಲೆ 'ಚೆರು ಬೊಳಂಬ'ವನ್ನು ಧರಿಸಲಾಗುತ್ತದೆ. ಇದು ಮರದ ಬಳೆಯ ಸುತ್ತಲೂ ಕೆಂಪು ಬಟ್ಟೆಯ ನೆರಿಗೆ ಇರುವ ಲಂಗದಂತಹ ಉಡುಪಾಗಿದೆ. 'ಚೆರುಬೊಳಂಬ'ದ ಮೇಲ್ಭಾಗದಲ್ಲಿ ಇಳಿಬಿಡುವ ವಸ್ತ್ರವನ್ನು 'ಚೆಂಡ್‌ಬಳೆ' ಎನ್ನುತ್ತಾರೆ. ಸೊಂಟಕ್ಕೆ ಚೇಲೆ ಎಂಬ ಕೆಂಪು ಬಣ್ಣದ ವಸ್ತ್ರವನ್ನು ಸುತ್ತಲಾಗುತ್ತದೆ.

**ತೆರೆ ಮುಡಿ/ತಿರ್‌ಮುಡಿ ಕಟ್ಟುವುದು**

ತೆರೆಕಟ್ಟುವ ಆಚರಣೆಯಲ್ಲಿ ತೆರೆಕಾರನು ತೆರೆಮುಡಿ ಕಟ್ಟಿಕೊಳ್ಳುವ ವಿಧಿ ಸಾಂಸ್ಕೃತಿಕವಾಗಿ ಪ್ರಮುಖವಾದುದು. ತೆರೆಮುಡಿ ಎಂದರೆ ದೇವರ ಮುಡಿ ಎಂದರ್ಥ. ತೆರೆಕಾರನು ಕಟ್ಟಿಕೊಳ್ಳುವ ಪ್ರಭಾವಳಿಯಂತಹ ಅಲಂಕಾರ ಇದಾಗಿದೆ. ತೆರೆಮುಡಿಯನ್ನು ಕಟ್ಟಿ ಮುಖವಾಡವನ್ನು ಧರಿಸಿ ಆಯುಧವನ್ನು ಕೈಯಲ್ಲಿ ಹಿಡಿದುಕೊಂಡರೆ ಅದನ್ನು 'ತೆರೆಯ ಪರಿಪೂರ್ಣ ವೇಷ' ಎಂದು ಜನಪದರು ಹೇಳುತ್ತಾರೆ. ದೈವದ ಅಲೌಕಿಕತೆಯನ್ನು ಈ ವೇಷವು ಪ್ರತಿಬಿಂಬಿಸುತ್ತದೆ. ಪರಿಪೂರ್ಣ ವೇಷ ಧರಿಸಿದ ತೆರೆಕಾರ ಚೌಂಡಿಯಮ್ಮೆಯಾಗಿ(ಚೌಂಡಿ ತಾಯಿ), ಕುಳಿಯ ದೈವವಾಗಿ, ಸಾರ್ತಾವು, ಅಯ್ಯಪ್ಪ, ಭಗವತಿಯಾಗಿ ಕಾಣಿಸಿಕೊಳ್ಳುವ ಪ್ರಕ್ರಿಯೆ ಇದಾಗಿದೆ. ದೈವಗಳ ತೆರೆಮುಡಿಯನ್ನು ಬಟ್ಟೆ, ಹಾಳೆ ಮತ್ತು ಬಿದಿರಿನಿಂದ ತಯಾರಿಸಲಾಗುತ್ತದೆ. ಆಯಾ ದೈವಗಳಿಗನುಗುಣವಾಗಿ ತೆರೆಮುಡಿಯ ವಿಸ್ತೀರ್ಣದಲ್ಲಿ ವ್ಯತ್ಯಾಸವಿರುತ್ತದೆ. ನಾಪೋಕ್ಲು ಭಗವತಿ ತೆರೆಯಲ್ಲಿ ಹದಿನೆಂಟು ಮೊಳ ಉದ್ದದ ತೆರೆಮುಡಿ ಕಟ್ಟಲಾಗುತ್ತದೆ. ಕದನೂರು ಭಗವತಿ ತೆರೆಯಲ್ಲಿ ಇಪ್ಪತ್ತೊಂದು ಮೊಳ ಉದ್ದದ ತೆರೆಮುಡಿ ಇರುತ್ತದೆ. ತೆರೆಮುಡಿಯ ಆಕಾರ, ಬಳಸುವ ವಸ್ತುಗಳು ಹಾಗೂ ಬಣ್ಣಗಳ ಸಂಯೋಜನೆ ಇತ್ಯಾದಿ ಅಂಶಗಳಿಂದ ಅದರ ವಿಶಿಷ್ಟತೆಯನ್ನು ಗುರುತಿಸಬಹುದು. ತೆರೆಮುಡಿ ಧರಿಸುವ ಕ್ರಿಯಾಚರಣೆಯು ದೈವಗಳ ವೇಷಕ್ಕೆ ವಿಸ್ತಾರತೆಯನ್ನು ಅವುಗಳ ಅಸ್ತಿತ್ವಕ್ಕೆ ಸಮಗ್ರತೆಯನ್ನು ತಂದು ಕೊಡುತ್ತದೆ.

**ಅಕ್ಕಿ ಇಡ್‌ವೊ(ಅಕ್ಕಿ ಹಾಕುವುದು)**

ತೆರೆಕಟ್ಟುವ ಆಚರಣೆಯ ಆರಂಭದಲ್ಲಿ ಹಾಗು ವೇಷಭೂಷಣಗಳನ್ನು ಧರಿಸಿದ ನಂತರ ಈ ವಿಧಿ ನಡೆಯುತ್ತದೆ. ಊರಿನ ತಕ್ಕ ಮುಖ್ಯಸ್ಥರು, ಒಕ್ಕದ ಪಟ್ಟೆದಾರ(ಹಿರಿಯ ವ್ಯಕ್ತಿ), ಒಕ್ಕದವರು, ಗ್ರಾಮಸ್ಥರು ಎಲ್ಲರೂ ನೆಲ್ಲಕ್ಕಿ ನಡುಬಾಡೆಯಲ್ಲಿ ಸೇರುತ್ತಾರೆ. ಕೈಯಲ್ಲಿ ಅಕ್ಕಿ ಹಿಡಿದುಕೊಂಡು ನಾಲ್ಕು ಮಾತುಗಳನ್ನಾಡಿ ದೇವರನ್ನು ಪ್ರಾರ್ಥಿಸಿ ಉರಿಯುವ ದೀಪಕ್ಕೆ ಹಾಗು ದೈವದ ವೇಷಧಾರಿಯ ಮೇಲೆ ಹಾಕುತ್ತಾರೆ. ಅಕ್ಕಿ ಹಾಕುತ್ತಿದ್ದಂತೆ ತೆರೆ ವೇಷಧಾರಿಗೆ ಆವೇಶ ಬರುತ್ತದೆ. ಹೀಗೆ ಅಲೌಕಿಕವಾದ ದೈವವು ಆವೇಶದ ಮೂಲಕ ವ್ಯಕ್ತಿ ಮಾಧ್ಯಮದಲ್ಲಿ ಕಾಣಿಸಿಕೊಳ್ಳುತ್ತದೆ.

ಪೂಜಾದ್ರವ್ಯವಾಗಿ, ಪೂಜಾ ಪರಿಕರಗಳಾಗಿ ಜನಪದರು ಧಾನ್ಯಗಳನ್ನು ಬಳಸುತ್ತಾರೆ. ಧಾನ್ಯಗಳನ್ನು ನಿಜರೂಪದಲ್ಲಿ ಕೆಲವೊಮ್ಮೆ ಆಹಾರ ಪದಾರ್ಥಗಳಾಗಿಯೂ ದೈವಕ್ಕೆ ಅರ್ಪಿಸುತ್ತಾರೆ. ಕೆಲವೊಮ್ಮೆ ಸಾಂಕೇತಿಕವಾಗಿಯೂ ಬಳಸುತ್ತಾರೆ. ಅಕ್ಕಿ ಜನರ ಮೂಲಭೂತ ಅವಶ್ಯಕತೆಗಳಲ್ಲಿ ಪ್ರಮುಖವಾದುದು. ಅದು ದೇಹಕ್ಕೆ ಶಕ್ತಿಯನ್ನು ಒದಗಿಸುತ್ತದೆ. ಸಮೃದ್ಧಿಯ ಸಂಕೇತವೂ ಆಗಿದೆ. ಇಂತಹ ಅಕ್ಕಿಯನ್ನು ತೆರೆಕಾರನ ಮೈಮೇಲೆ ಹಾಕಿ ದೈವವನ್ನು ಆವಾಹಿಸಲು ಅಗತ್ಯವಾದ ಶಕ್ತಿ ಅವರಿಗೆ ಒದಗುವಂತಾಗಲಿ ಎಂದು ಹರಸುತ್ತಾರೆ. ಪ್ರಾರ್ಥಿಸಿ ಅಕ್ಕಿ ಹಾಕಿದ ನಂತರ ತೆರೆ ವೇಷಧಾರಿಯು ಅಲೌಕಿಕ ದೈವಗಳ ಪ್ರತೀಕದಂತೆ ಕಾರ್ಯನಿರ್ವಹಿಸುತ್ತಾನೆ.

**ಅನುವಾದ ಕೊಡ್‌ಪೊ(ಅಭಯದ ಮಾತುಗಳು ಹಾಗೂ ಆಶೀರ್ವಾದ ನೀಡುವುದು)**

ಆಯಾ ದೈವಗಳ ವೇಷವನ್ನು ಧರಿಸಿ ಚಂಡೆ ಅಥವಾ ಮದ್ದಳೆಯ ಹಿಮ್ಮೇಳಕ್ಕೆ ಕುಣಿಯುವ ತೆರೆಯು ತನ್ನ ಭಕ್ತರಿಗೆ ಅಭಯದ ಮಾತುಗಳನ್ನು ಆಡುತ್ತದೆ. ತನ್ನ ಮಹಿಮೆಯನ್ನು ಪ್ರದರ್ಶಿಸಿ ಹರಸುತ್ತದೆ. ಕಷ್ಟಗಳಿಗೆ ಪರಿಹಾರವನ್ನು ನೀಡಿ ತಾಯಿಯಂತೆ ಕಾಪಾಡುತ್ತೇನೆ ಎನ್ನುತ್ತದೆ. ಭಕ್ತರು ಸಲ್ಲಿಸಿದ ಹರಕೆಯನ್ನು ಸ್ವೀಕರಿಸುತ್ತದೆ. ಈ ಪ್ರಕ್ರಿಯೆಯನ್ನು ಒಟ್ಟಾಗಿ ಅನುವಾದ ಕೊಡ್‌ಪೊ ಎನ್ನುತ್ತಾರೆ. ಇದರ ಮೂಲಕ ತೆರೆಯು ಜನಪದರಿಗೆ ಹತ್ತಿರವಾಗುತ್ತದೆ.

**ಬಾರಣಿ**

ಅಲೌಕಿಕವಾದ ದೈವಗಳು ಆಹಾರವನ್ನು ಸ್ವೀಕರಿಸುವ ಮತ್ತು ಪ್ರಸಾದ ನೀಡುವ ವಿಧಿಯನ್ನು' ಬಾರಣಿ' ಎಂದು ಕರೆಯುತ್ತಾರೆ. ಜನಪದರು ದೈವಗಳಿಗೆ ಸಲ್ಲಿಸುವ ಆಹಾರವನ್ನು ಅದರ ಪ್ರತೀಕವಾಗಿರುವ ತೆರೆಕಾರರು ಸ್ವೀಕರಿಸುತ್ತರೆ. ಹುರುಕುಲು, ಬಾಳೆ ಹಣ್ಣು, ತೆಂಗಿನಕಾಯಿಯ ಚೂರು, ಮದ್ಯ, ಹಾಲು, ಎಳನೀರು ಇವುಗಳು ದೈವಗಳ ಆಹಾರದಲ್ಲಿ ಸೇರಿರುತ್ತವೆ. ಕೊಡಿ ಬಾಳೆ ಎಲೆಯಲ್ಲಿ (ಬಾಳೆ ಎಲೆಯ ತುದಿಭಾಗ) ಬಡಿಸಲಾದ ಈ ಆಹಾರದ ಮುಂದೆ ದೈವವು ಕುಳಿತುಕೊಳ್ಳುತ್ತದೆ. ನೆರೆದವರೆಲ್ಲರನ್ನೂ ಕರೆದು ಪ್ರಸಾದವೆಂದು ವಿತರಿಸುತ್ತದೆ. ಎಲ್ಲರಿಗೂ ನೀಡಿದ ನಂತರ "ಪ್ರಸಾದ ಸ್ವೀಕರಿಸಲೇ" ಎಂದು ಅನುಮತಿ ಕೇಳುತ್ತದೆ. ಅನಂತರ ನೆಲದಲ್ಲಿ ಬಿದ್ದುಕೊಂಡು ಎರಡೂ ಕೈಗಳಿಂದ ಬಾಚಿ ಬಾಯಿಗೆ ತುರುಕುತ್ತಾ ಸಂಭ್ರಮಿಸುತ್ತದೆ. ಸಸ್ಯಾಹಾರ ಮತ್ತು ಮಾಂಸಾಹಾರವನ್ನು ದೈವಗಳಿಗೆ ಅರ್ಪಿಸಲಾಗುತ್ತದೆ. ಸಸ್ಯಾಹಾರವಾದರೆ ಅದನ್ನು 'ದೇವ ಕ್ರಿಯೆ' ಎಂದು ಕರೆಯುತ್ತಾರೆ. ಮಾಂಸಾಹಾರವಾದರೆ 'ಅಸುರ ಕ್ರಿಯೆ' ಎನ್ನಲಾಗುತ್ತದೆ.

ತೆರೆಕಟ್ಟುವ ಸಮುದಾಯಗಳಲ್ಲಿ ಒಂದಾದ ಪಣಿಕರು 'ದೇವಕ್ರಿಯೆ' ನಡೆಸುವವರು. ಮಲಿಯರು 'ಅಸುರಕ್ರಿಯೆ' ಅಥವಾ 'ಉದರಕ್ರಿಯೆ' ನಡೆಸುವವರು. 'ದೇವಕ್ರಿಯೆ' ನಡೆಸುವವರು ತೆರೆಕಟ್ಟುವ ಸಂದರ್ಭದಲ್ಲಿ ಹಾಲು ಹಣ್ಣು ಸ್ವೀಕರಿಸುತ್ತಾರೆ. ತೆರೆ ಕಳೆದ ನಂತರ ಆಯಾ ದೈವಗಳ ಸ್ಥಾನದಲ್ಲಿ ಪ್ರಾಣಿಗಳ ಕುತ್ತಿಗೆ ಕತ್ತರಿಸಿ ಬಲಿ ನೀಡುತ್ತಾರೆ. 'ಅಸುರಕ್ರಿಯೆ' ನಡೆಸುವವರು ತೆರೆಕಟ್ಟಿದ ಸಂದರ್ಭದಲ್ಲಿ ಪ್ರಾಣಿಬಲಿ ನೀಡುವಾಗ ಅವುಗಳ ಕುತ್ತಿಗೆಯನ್ನು ಬಾಯಿಯಿಂದ ಕಚ್ಚಿ ರಕ್ತ ಹೀರುತ್ತಾರೆ. ವಿಷ್ಣುಮೂರ್ತಿ, ಕುಳಿಯಮೆ ಚೌಂಡಿ, ಕರಿಚೌಂಡಿ ದೈವಗಳಿಗೆ ಕೋಳಿ ಮತ್ತು ಹಂದಿಯ ಕುತ್ತಿಗೆಯನ್ನು ಕತ್ತರಿಸಿ ರಕ್ತತರ್ಪಣ ಸಲ್ಲಿಸಲಾಗುತ್ತದೆ. ನರಿಪೂದ ತೆರೆಯು ಕೋಳಿಯ ಕುತ್ತಿಗೆಯನ್ನು ಕಚ್ಚಿ ರಕ್ತವನ್ನು ಹೀರಿ ಕರುಳು ಮತ್ತು ಮಾಂಸವನ್ನು ತಿನ್ನುತ್ತದೆ. ಬಲಿ ನೀಡುವ ಸಂದರ್ಭದಲ್ಲಿ ಕತ್ತರಿಸಿದ ಹಂದಿಯ ದೇಹವನ್ನು ಹಲ್ಲಿನಿಂದ ಕಚ್ಚಿ ಹೊತ್ತೊಯ್ಯುತ್ತಾ ಸಂಭ್ರಮಿಸುತ್ತದೆ.

**ತೆರೆ ಬಾಂಗುವೊ(ತೆರೆಯ ಮುಕ್ತಾಯ)**

ತೆರೆ ಕಟ್ಟುವ ಆಚರಣೆಯ ಮುಕ್ತಾಯದ ಹಂತವಿದು. ಇಲ್ಲಿ ದೈವವು ವ್ಯಕ್ತಿ ಮಾಧ್ಯಮವನ್ನು ಬಿಟ್ಟು ಅಗೋಚರವಾಗುತ್ತದೆ. ಕಡಿಯ ಕಳ(ಬಲಿ ನೀಡುವ ಸ್ಥಳ)ದಲ್ಲಿ ರಕ್ತ ಬಲಿ ನೀಡಿದ ನಂತರ ತೆರೆ ಬಾಂಗುವ ವಿಧಿ ನಡೆಯುತ್ತದೆ. ಇದಾದ ನಂತರ ದೈವದ ಭಂಡಾರ ಮತ್ತು ಮೊಗ(ಮುಖವಾಡ)ವನ್ನು ಮೂಲ ಸ್ಥಾನವಾದ ಕೋಟ(ಗುಡಿ)ಯಲ್ಲಿ ಇರಿಸಿದರೆ ಅಲ್ಲಿಗೆ ತೆರೆ ಆಚರಣೆ ಮುಗಿಯಿತು ಎಂದು ಜನಪದರ ಭಾವಿಸುತ್ತಾರೆ.

ಹೀಗೆ ತೆರೆಕಟ್ಟುವ ಆಚರಣೆಯಲ್ಲಿ ಹಲವು ವಿಶಿಷ್ಟ ವಿಧಿವಿಧಾನಗಳಿವೆ. ಇವುಗಳಲ್ಲಿ ಪ್ರಾದೇಶಿಕವಾಗಿ ಹಾಗೂ ತೆರೆಕಟ್ಟುವ ಸಮುದಾಯಗಳ ಹಿನ್ನೆಲೆಯಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ತೆರೆಕಟ್ಟುವ ಆಚರಣೆಯನ್ನು ನಿರೂಪಿಸುವ ಶಿಷ್ಟ ಶಾಸ್ತ್ರಗಳು ಯಾವುದೂ ಇಲ್ಲ. ಸಮಾಜವು ಧಾರ್ಮಿಕವಾದ ಈ ಆಚರಣೆಯನ್ನು ಸಾಮೂಹಿಕವಾಗಿ ನಡೆಸುತ್ತದೆ. ಜಾನಪದ ವಲಯದಲ್ಲಿ ಪೀಳಿಗೆಯಿಂದ ಪೀಳಿಗೆಗೆ ಸಾಗಿ ಬಂದಿರುವ ತೆರೆಕಟ್ಟುವ ಆಚರಣೆಯು ತನ್ನದೇ ಆದ ಈ ವಿಧಿವಿಧಾನಗಳನ್ನು ಸಂಪ್ರದಾಯ ಬದ್ಧವಾಗಿ ಉಳಿಸಿಕೊಳ್ಳುವ ಮೂಲಕ ತಲೆತಲಾಂತರದಿಂದ ಸಾಗಿಬಂದಿದೆ.

**ಪರಾಮರ್ಶನ ಗ್ರಂಥಗಳು**


1. ಎಂ.ಎನ್. ಶ್ರೀನಿವಾಸ್. ರಿಲೀಜಿಯನ್ ಅಂಡ್ ಸೊಸೈಟಿ ಅಮಾಂಗ್ ದ ಕೂರ್ಗ್ಸ್ ಆಫ್ ಸೌತ್ ಇಂಡಿಯಾ. ಮುಂಬಯಿ. ಮೀಡಿಯಾ ಪ್ರಮೋಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈವೇಟ್ ಲಿಮಿಟೆಡ್. (1978)
2. ಕೆ. ಚಿಣ್ಣಪ್ಪ ಗೌಡ. ಭೂತಾರಾಧನೆ ಜಾನಪದೀಯ ಅಧ್ಯಯನ. ಮಂಗಳೂರು. ಮದಿಪು ಪ್ರಕಾಶನ. (1990)
3. ಡಿ.ಎನ್. ಕೃಷ್ಣಯ್ಯ. ಕೊಡಗಿನ ಇತಿಹಾಸ. ಮೈಸೂರು. ಮೈಸೂರು ವಿಶ್ವವಿದ್ಯಾನಿಲಯ. (1995)
4. ತಂಬಂಡ ವಿಜಯ್ ಪೂಣಚ್ಚ. ಆಧುನಿಕ ಕೊಡಗು. ಹಂಪಿ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. (2000)
5. ನಡಿಕೇರಿಯಂಡ ಚಿಣ್ಣಪ್ಪ. (ಸಂ.) ಪಟ್ಟೋಲೆ ಪಳಮೆ. ಮಡಿಕೇರಿ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ. (2002)
6. ಸೂರ್ಯನಾಥ ಯು. ಕಾಮತ್. (ಮು. ಸಂ.) ಭಾರತದ ಗೆಜೆಟಿಯರ್ ಕರ್ನಾಟಕ ರಾಜ್ಯ, ಕೊಡಗು ಜಿಲ್ಲೆ. ಬೆಂಗಳೂರು. ಕರ್ನಾಟಕ ರಾಜ್ಯ ಸರ್ಕಾರ. (1992)
7. ಹೆಬ್ಬಾಲೆ ಕೆ. ನಾಗೇಶ್. ಕಾವೇರಿ ಜಾನಪದ. ಹಂಪಿ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. (2005)